ಪಿ.ಡಬ್ಲ್ಯು-1

ಫಿರ್ಯಾದಿದಾರರನ್ನು ದಿನಾಂಕ 26-09-2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು

**ಪಾಟೀಸವಾಲುಃ ಆರೋಪಿಯ ಪರ ಶ್ರೀ.ಎಲ್ ಎಂ ಬಿ ವಕೀಲರ ಪರವಾಗಿ ಶ್ರೀ ಎಂ ಪಿ ಕೆ ವಕೀಲರಿಂದಃ-**

ನಾನು ಸುಮಾರು 05 ವರ್ಷಗಳಿಂದ ಪಿರ್ಯಾದಿದಾರ ಸೋಸಾಯಿಟಿಯಲ್ಲಿ ಮ್ಯಾನೇಜರಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಸೋಸಾಯಿಟಿಯಿಂದ ಆರೋಪಿಗೆ ಸುಲಭ ಸಾಲ ಕೊಟ್ಟಿರುತ್ತೇವೆ. ಆರೋಪಿಯಿಂದ ಇಬ್ಬರು ಜಾಮೀನುದಾರರನ್ನು ಪಡೆದುಕೊಂಡು ಸಾಲವನ್ನು ಕೊಟ್ಟಿರುತ್ತೇವೆ. ಮುಲ್ಲಾ ಮತ್ತು ಅಸ್ಲಂ ಕಬಾಡಿ ಎಂಬುವವರು ಜಾಮೀನುದಾರರು ಇದ್ದರು. ಆರೋಪಿ ಮೇಸ್ತ್ರಿ ಕೆಲಸ ಮಾಡುತ್ತಿದ್ದು ವ್ಯಾಪಾರ ಮಾಡುವುದಾಗಿ ಹೇಳಿ ಸಾಲವನ್ನು ಪಡೆದಿರುತ್ತಾರೆ. ಆರೋಪಿಯಿಂದ ಬಾಂಡ ಮತ್ತು ಜಾಮೀನುದಾರರನ್ನು ತೆಗೆದುಕೊಂಡು ದಿ 13-06-2018 ರಂದು ಅಲ್ಪಾವದಿ ಅಂದರೆ ಒಂದು ವರ್ಷಕ್ಕೆ ಸಾಲ ಮಂಜೂರು ಮಾಡಿರುತ್ತೇವೆ. ತಿಂಗಳಿಗೆ ರೂಃ 4,500/- ಕಂತನ್ನು ಕಟ್ಟಬೇಕಾಗಿತ್ತು. ಆದರೆ ಆರೋಪಿ ಯಾವುದೇ ಕಂತನ್ನು ಕಟ್ಟಿರುವದಿಲ್ಲ. ಸಾಮಾನ್ಯವಾಗಿ ಆರೋಪಿ 03 ಕಂತಿನ ಹಣವನ್ನು ತುಂಬದೇ ಇದ್ದಾಗ ಬ್ಯಾಂಕಿನಿಂದ ನೋಟಿಸನ್ನು ಕೊಡುತ್ತೇವೆ ಎಂದರೆ ಸರಿ. ಅದೇ ರೀತಿ ಆರೋಪಿಗೆ ನೋಟಿಸ ಕೊಟ್ಟಿರುತ್ತೇವೆ. ಆರೋಪಿಯ ಸಾಲದ ದಾಖಲೆಗಳ ನಕಲು ಪ್ರತಿಯನ್ನು ಹಾಜರು ಪಡಿಸಿದ್ದೇನೆ. ಆರೋಪಿಯಿಂದ ಸಾಲದ ಹಣವನ್ನು ಕೇಳಲು ಹೋದಾಗ ಆತ ಈ ಕೇಸಿನ ಚಕ್ ನ್ನು ಕೊಟ್ಟಿರುತ್ತಾನೆ. ನಮ್ಮ ಸೋಸಾಯಿಟಿಯಿಂದ ಆರೋಪಿಗೆ ಸುಲಭ ಸಾಲವನ್ನು ಕೊಟ್ಟಿದ್ದು ಆತ ಹಣ ಮರಳಿ ಕೊಡದ ಕಾರಣ ನೋಟಿಸ ನೀಡಿದ್ದು ನಂತರ ಆತ ಈ ಕೇಸಿನ ಚಕ್ ನ್ನು ಕೊಟ್ಟಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.